Karnatak University's,
KARNATAK SCIENCE COLLEGE, DHARWAD
*NAAC Accredited*
Phone No: 0836-2215410 & 2215400 Fax: 0836-2744334
Email: principal.kscd@gmail.com Web: www.kscd.ac.in

No.KSCD/2025-26/ Date: 27-03-2026

## ಆಡಳಿತ ಮಂಡಳಿ ಸಭೆ ವಿಷಯ ಹಾಗೂ ನಿರ್ಣಯಗಳು (Governing Council Meeting Resolutions)

ಮಾನ್ಯ ಕುಲಪತಿಗಳ ಆದೇಶದಂತೆ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಸಭೆಯನ್ನು (Governing Council Meeting) ದಿನಾಂಕ: 27.03.2026 ರಂದು ಮಧ್ಯಾಹ್ನ 3.00 ಗಂಟೆಗೆ ಡಾ. ಡಿ.ಸಿ. ಪಾವಟೆ ಸಭಾಭವನದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು.

1. **ಪ್ರೊ. ಎ.ಎಂ. ಖಾನ,** ಮಾನ್ಯ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. — ಅಧ್ಯಕ್ಷರು
2. **ಶ್ರೀಮತಿ ರತ್ನಾ ಪಾಟೀಲ,** ಸಿಂಡಿಕೇಟ ಸದಸ್ಯರು, ನಾರಾಯಣಪುರ, ಧಾರವಾಡ–083. — ಸದಸ್ಯರು
3. **ನಿರ್ದೇಶಕರು (ಪದನಿಮಿತ್ತ),** ವಿದ್ಯಾವಿಷಯಕ ಪರಿಷತ್ ಸದಸ್ಯರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. — ಸದಸ್ಯರು
4. **ಡಾ. ಜಿ.ಎಚ್. ಮಳಿಮಠ,** ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ. — ಸದಸ್ಯರು
5. **ಡಾ. (ಶ್ರೀಮತಿ) ವ್ಹಿ.ಎ. ಅಮ್ಮಿನಭಾವಿ,** ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ — ಸದಸ್ಯರು
6. **ಡಾ.(ಶ್ರೀಮತಿ) ನಿರುಪಮಾ ಜೆ.ಎಂ.,** ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ — ಸದಸ್ಯರು
7. **ಹಣಕಾಸು ಅಧಿಕಾರಿಗಳು,** ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. — ವಿಶೇಷ ಆಹ್ವಾನಿತರು
8. **ಸ್ಥಾನಿಕ ಅಭಿಯಂತರರು,** ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. — ವಿಶೇಷ ಆಹ್ವಾನಿತರು
9. **ನಿರ್ದೇಶಕರು,** ಮಾಹಿತಿ ತಂತ್ರಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. — ವಿಶೇಷ ಆಹ್ವಾನಿತರು
10. **ಪ್ರಾಚಾರ್ಯರು,** ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ. — ಕಾರ್ಯದರ್ಶಿಗಳು

ಆಡಳಿತ ಮಂಡಳಿಯ ಕಾರ್ಯದರ್ಶಿ ಮತ್ತು ಪ್ರಾಚಾರ್ಯರು ಅಧ್ಯಕ್ಷರು ಮತ್ತು ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಆರಂಭಿಸಲು ಅಧ್ಯಕ್ಷರಲ್ಲಿ ಕೋರಿಕೊಂಡರು.

<table>
<tr><th>ಅ.ನಂ.</th><th></th><th>ವಿಷಯ</th><th>ನಿರ್ಣಯಗಳು</th></tr>
<tr><td>1</td><td>ವಿಷಯ</td><td>ಹಿಂದಿನ ಆಡಳಿತ ಮಂಡಳಿ ಸಭೆಯ ವಿಷಯಗಳನ್ನು ಓದಿ ದೃಢೀಕರಿಸುವದು<br>(ಸಭೆ ನಡೆದ ದಿನಾಂಕ: 27-08-2024)</td><td>ಹಿಂದಿನ ಆಡಳಿತ ಮಂಡಳಿ ಸಭೆಯ ವಿಷಯಗಳನ್ನು ಸಭೆಯ ಮುಂದೆ ಓದಿ ದೃಢೀಕರಿಸಲಾಯಿತು. 27.08.2024 ರಂದು ಜರುಗಿದ ಆಡಳಿತ ಮಂಡಳಿಯ ಸಂಕ್ಷಿಪ್ತ ವರದಿಯನ್ನು ಚರ್ಚಿಸಲಾಯಿತು. ಸದರಿ ನಿರ್ಣಯಗಳಲ್ಲಿ ನಿರ್ಣಯ ಸಂಖ್ಯೆ 2, 8 ಮತ್ತು 9 ಈ ಮುಂದೆ ಕಾಣಿಸಿದಂತೆ ತಿದ್ದುಪಡಿ ಮಾಡಲಾಗಿರುತ್ತದೆ.
<table>
<tr><th>ವಿಷಯ ಸಂಖ್ಯೆ</th><th>ದಾಖಲಾದ ನಿರ್ಣಯ</th><th>ತಿದ್ದುಪಡಿಗೊಳಿಸಲಾದ ನಿರ್ಣಯ</th></tr>
<tr><td>2</td><td>ತರಗತಿ ಕೊಠಡಿಗಳು, ಪದವಿಪೂರ್ವ ಗಣಿತ ಮತ್ತು ಸಂಖ್ಯಾಶಾಸ್ತ್ರದ ಪ್ರಯೋಗಾಲಯಗಳು ಮತ್ತು ಒಂದು ವಿದ್ಯಾರ್ಥಿನಿಯರ ವಿಶ್ರಾಂತಿ ಕೊಠಡಿಯನ್ನು ಹೊಂದಲು ಶೈಕ್ಷಣಿಕ ಕಟ್ಟಡದ ನಿರ್ಮಾಣ ಕುರಿತು.</td><td>ವಿದ್ಯಾರ್ಥಿನಿಯರಿಗೆ ಪ್ರತಿ ಕಟ್ಟಡದಲ್ಲಿ attached bathroom ಇರುವ ರೂಮನ್ನು ವಿದ್ಯಾರ್ಥಿನಿಯರ ವಿಶ್ರಾಂತಿ ಗೃಹವನ್ನಾಗಿ ಮಾಡಲು ಮಾನ್ಯ ಕುಲಪತಿಗಳು ಸೂಚಿಸಿದರು.</td></tr>
<tr><td>8</td><td>ಪಿಯುಸಿ ಹುದ್ದೆಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು.</td><td>ಸರ್ಕಾರದ ಅನುಮೋದನೆಯನ್ನು ಪಡೆಯುವುದು ವಿಳಂಬವಾದ ಕಾರಣ ಮಂಜೂರಾದ ಹುದ್ದೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಅದನ್ನು ಸಿಂಡಿಕೇಟ್‌ಗೆ ಸಲ್ಲಿಸಿ ನಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮಾನ್ಯ ಕುಲಪತಿಗಳು ತಿಳಿಸಿದರು.</td></tr>
<tr><td>9</td><td>ಜೈವಿಕ ತಂತ್ರಜ್ಞಾನವನ್ನು ರಸಾಯನಶಾಸ್ತ್ರ ವಿಭಾಗದಿಂದ ಪ್ರಾಣಿಶಾಸ್ತ್ರ ವಿಭಾಗಕ್ಕೆ ಸ್ಥಳಾಂತರಿಸುವದು, ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮ ಜೀವವಿಜ್ಞಾನ ಎಂಬ ಒಂದು ಭಾಗವನ್ನು ರಚಿಸುವದು.</td><td>ಜೈವಿಕ ತಂತ್ರಜ್ಞಾನ ವಿಭಾಗದ ಪ್ರ್ಯಾಕ್ಟಿಕಲ್‌ನ ಸಾಮ್ಯತೆಯಿಂದಾಗಿ centralization ದೃಷ್ಟಿಯಿಂದ Zoology ವಿಭಾಗಕ್ಕೆ ಸ್ಥಳಾಂತರಿಸಲು ಅನುಮೋದಿಸಿದರು. ಸಂಯೋಜಕರು ರಸಾಯನಶಾಸ್ತ್ರ ವಿಭಾಗದಲ್ಲಿ ಮುಂದುವರೆಯುವ ಕುರಿತು ಪ್ರಾಚಾರ್ಯರು ಸಭೆಗೆ ತಿಳಿಸಿದರು.</td></tr>
</table></td></tr>
<tr><td>2</td><td>ವಿಷಯ</td><td>ಮಹಾವಿದ್ಯಾಲಯದ ಪದವಿ ಖಾತೆಗಳಲ್ಲಿ ಜಮೆಯಾಗುವ ಒಂದು ವರ್ಷದ ಶುಲ್ಕ ಒಟ್ಟು ಮೊತ್ತದಲ್ಲಿ ಶೇ. 50% ಮೊತ್ತವನ್ನು ಸ್ಥಿರ ಠೇವಣಿ ಮಾಡಲು ಚರ್ಚಿಸುವದು</td><td>1) ಮಹಾವಿದ್ಯಾಲಯದಲ್ಲಿ ಸಂಗ್ರಹವಾಗುವ ವಿವಿಧ ಶುಲ್ಕ, ಫೀ ಹಣವನ್ನು ವಿಶ್ವವಿದ್ಯಾಲಯದ Budget ಗೆ ಅಳವಡಿಸಿಕೊಳ್ಳುವದು.<br>2) ಮಹಾವಿದ್ಯಾಲಯಕ್ಕೆ ಅದರದೇ ಆದ ಆಯವ್ಯಯವನ್ನು ಮಂಡಿಸುವದು.</td></tr>
</table>

| | | | |
|---|---|---|---|
| | | ಮತ್ತು ಮಹಾವಿದ್ಯಾಲಯಕ್ಕೆ ಖಾಸಗಿ ಲೆಕ್ಕ ಪರಿಶೋಧಕರನ್ನು ನೇಮಿಸಿಕೊಳ್ಳುವದು. | 3) ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ವಿವಿಧ ಖಾತೆಗಳಲ್ಲಿರುವ ಮೊತ್ತಕ್ಕೆ sweep in & sweep out ಮಾಡಲು ಬ್ಯಾಂಕಿಗೆ ಪತ್ರ ಬರೆಯಲು ಸೂಚಿಸಲಾಯಿತು.<br>4) ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಹೆಸರಿನಲ್ಲಿರುವ ಒಟ್ಟು ಖಾತೆಗಳ ವಿವರ ಪಡೆದು ಅನವಶ್ಯಕವಿರುವ ಚಾಲ್ತಿಯಲ್ಲಿರದ ಖಾತೆಗಳನ್ನು ಬಂದ ಮಾಡಲು ಅನುಮೋದಿಸಲಾಯಿತು.<br>5) ಈ ಎಲ್ಲ ಖಾತೆಗಳ ನಿರ್ವಹಣೆಗಾಗಿ ಒಬ್ಬ ಚಾರ್ಟರ್ಡ ಅಕೌಂಟಂಟ (ಲೆಕ್ಕ ಪರಿಶೋಧಕರು) ರನ್ನು ಸಹಾಯ ಪಡೆಯಲು ಅನುಮೋದಿಸಲಾಯಿತು. [illegible] CA [illegible] |
| 3 | ವಿಷಯ | ಮಹಾವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಈಗಾಗಲೇ ಅಳವಡಿಸಲಾಗಿರುವ ಕಂಪ್ಯೂಟರಗಳಿಗೆ ಅವಶ್ಯಕತೆಗನುಸಾರವಾಗಿ ಹೊಸ ಯು.ಪಿ.ಎಸ್. ಖರೀದಿಸುವದು. | ಯು.ಪಿ.ಎಸ್. ಗಾಗಿ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿದರು. |
| 4 | ವಿಷಯ | ಪ್ರಾಣಿಶಾಸ್ತ್ರ ಮತ್ತು ಜೀವಶಾಸ್ತ್ರ ಎರಡೂ ವಿಭಾಗದಲ್ಲಿ ಈಗಾಗಲೇ ಅರ್ಧ ಭಾಗದಷ್ಟು ಮೇಲ್ಛಾವಣಿ ಶೀಟಗಳನ್ನು ಅಳವಡಿಸಲಾಗಿದ್ದು, ಇನ್ನುಳಿದ ಭಾಗಕ್ಕೆ ಮೇಲ್ಛಾವಣಿ ಶೀಟ ಅಳವಡಿಸುವದು. | ಮೇಲ್ಛಾವಣಿ ಶೀಟ ಅಳವಡಿಸುವದಕ್ಕೆ estimate ನೀಡಿ ಕಾರ್ಯ ಕೈಗೊಳ್ಳಲು ಸ್ಥಾನಿಕ ಇಂಜಿನಿಯರ ಅವರಿಗೆ ಸೂಚಿಸಲಾಯಿತು. |
| 5 | ವಿಷಯ | ಮಹಿಳಾ ಸಿಬ್ಬಂದಿಗೆ ಮತ್ತು ವಿದ್ಯಾರ್ಥಿನಿಯರ್ರಿಗೆ ಅನುಕೂಲವಾಗುವಂತೆ ವಿಶ್ರಾಂತಿಗೃಹ ನಿರ್ಮಿಸುವದು ಅಥವಾ ಮೊದಲಿನಂತೆ ಭೂಗೋಳಶಾಸ್ತ್ರ ವಿಭಾಗದಲ್ಲಿರುವ ಹಳೆಯ ಪ್ರಾಚಾರ್ಯರ ಕಚೇರಿ (ಈಗಿನ ಆರೋಗ್ಯ ಕೇಂದ್ರದ) ಎರಡು ಕೊಠಡಿಗಳನ್ನು ಅವರಿಗೆ ವಿಶ್ರಾಂತಿ ಗೃಹವಾಗಿ ಪರಿವರ್ತಿಸುವ ಕುರಿತು. | ಭೂಗೋಳಶಾಸ್ತ್ರ ವಿಭಾಗದಲ್ಲಿರುವ ಆರೋಗ್ಯ ಕೇಂದ್ರದ ಎರಡು ಕೊಠಡಿಗಳನ್ನು ಈ ಮೊದಲಿಗೆ (attached toilet ಇರುವ) ವಿದ್ಯಾರ್ಥಿನಿಯರ ವಿಶ್ರಾಂತಿಗೃಹವಾಗಿ ಉಪಯೋಗಿಸಲಾಗುತ್ತಿತ್ತು. ಆರೋಗ್ಯ ಕೇದ್ರದವರು ಪ್ರತ್ಯೇಕತಾ ಕೊಠಡಿಯನ್ನಾಗಿ (Isolation room) ಕೋವಿಡ್ ಸಮಯದಲ್ಲಿ ಅದನ್ನು ಪಡೆದುಕೊಂಡಿದ್ದರು. ಈಗ ಅದನ್ನು ವಿದ್ಯಾರ್ಥಿನಿಯರ ವಿಶ್ರಾಂತಿಗೃಹವನ್ನಾಗಿ ಪರಿವರ್ತಿಸಲು ಅನುಮೋದಿಸಲಾಗಿದೆ. |
| 6 | ವಿಷಯ | ಮಹಾವಿದ್ಯಾಲಯದ ಪಿಯುಸಿ, ಪದವಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳ ನಿಯಮಾನುಸಾರ ಪ್ರತಿ 2 ವರ್ಷಗಳಿಗೊಮ್ಮೆ ಶೇ. 10% ರಷ್ಟು ಶುಲ್ಕವನ್ನು ಏರಿಕೆ ಮಾಡುತ್ತಾ ಬಂದಿರುತ್ತದೆ. ಆದರೆ ಪ್ರಸ್ತುತ ಸ್ಥಿತಿಯಲ್ಲಿ ಎಲ್ಲ ರೀತಿಯ ಸಲಕರಣೆ ಮತ್ತು ವಿವಿಧ ಸಾಮಗ್ರಿಗಳ ದರಗಳು ದುಪ್ಪಟ್ಟು ಆಗಿರುವದರಿಂದ ಮಾರುಕಟ್ಟೆಯ ದರಗಳನುಸಾರ ಶೇ. 25% ರಷ್ಟು ಪ್ರವೇಶ ಶುಲ್ಕವನ್ನು ಪರಿಷ್ಕರಿಸಲು ಸಭೆಗೆ ಸಲ್ಲಿಸಲಾಗಿದೆ. | ಮಹಾವಿದ್ಯಾಲಯದಲ್ಲಿ ಪ್ರತಿ 2 ವರ್ಷಗಳಿಗೊಮ್ಮೆ ಪಿಯುಸಿ, ಪದವಿ ವಿದ್ಯಾರ್ಥಿಗಳಿಗೆ ಶೇ. 10% ಶುಲ್ಕವನ್ನು ಹೆಚ್ಚಳ ಮಾಡುವ ಕುರಿತು ಕರ್ನಾಟಕ ಮಹಾವಿದ್ಯಾಲಯದ ಹಣಕಾಸು ಸಮಿತಿಯನ್ನು ರಚಿಸಿ ವರದಿ ಪಡೆದು ಹಣಕಾಸು ಅಧಿಕಾರಿಗಳಿಗೆ ಹಾಗೂ DSW ರವರಿಗೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು. |

| | | | |
|---|---|---|---|
| 7 | **ವಿಷಯ** | ಮಹಾವಿದ್ಯಾಲಯದ ಆವರಣದಲ್ಲಿ ಈಗಾಗಲೇ ಕವಿವಿ ಅಳವಡಿಸಿಕೊಂಡಿರುವ ಸಾರ್ವಜನಿಕ ನಿರ್ಬಂಧದ ನಿಯಮಗಳನ್ನು ಮಹಾವಿದ್ಯಾಲಯಕ್ಕೂ ಅನ್ವಯಿಸುವಂತೆ ಚರ್ಚಿಸಿ ಜಾರಿಗೊಳಿಸುವದು ಮತ್ತು ಮಹಾವಿದ್ಯಾಲಯಕ್ಕೆ ಇನ್ನೂ ಹೆಚ್ಚಿನ ಸೆಕ್ಯೂರಿಟಿ ಗಾರ್ಡಗಳನ್ನು ಒದಗಿಸುವ ಕುರಿತು ಚರ್ಚಿಸುವದು. | ಕರ್ನಾಟಕ ಮಹಾವಿದ್ಯಾಲಯದ ಮೈದಾನಕ್ಕೆ ಬರುವ ಸಾರ್ವಜನಿಕರಿಂದ Membership fees ಸಂಗ್ರಹಿಸುವದು ಹಾಗೂ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರು ಇಬ್ಬರೂ ಚರ್ಚಿಸಿ ಕ್ರಮ ವಹಿಸಲು ತಿಳಿಸಲಾಯಿತು. |
| 8 | **ವಿಷಯ** | ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲಾದ ಇತರೆ ವಿಷಯಗಳು. | 1. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ವಿವಿಧ ವಿಭಾಗಗಳ ಕಂಪ್ಯೂಟರಗಳ ನಿರ್ವಹಣೆಗೆ ತಂತ್ರಜ್ಞರನ್ನು (Technician) ನಿಯೋಜಿಸಲು ಸೂಚಿಸಲಾಯಿತು.<br>2. Muster ನ್ನು ಪ್ರಾಚಾರ್ಯರ ಕೊಠಡಿಯಲ್ಲಿ ಇರಿಸುವದರ ಬಗ್ಗೆ ಚರ್ಚಿಸಿ ಅದನ್ನು Biometric app ಮೂಲಕ ಮಾಡುವ ಬಗ್ಗೆ ಅನುಮೋದಿಸಲಾಯಿತು.<br>3. ಪಿಯುಸಿ first floor ಪ್ರಸ್ತುತ ಕಟ್ಟಡದ ಸ್ಥಿತಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಸ್ಥಾನಿಕ ಅಭಿಯಂತರರಿಗೆ ವಹಿಸಲಾಯಿತು.<br>4. ಭೌತಶಾಸ್ತ್ರ ವಿಭಾಗದ ಸೋರುವಿಕೆಗೆ ಸೂಕ್ತ ಕ್ರಮ ಕೈಗೊಂಡು, ಸದ್ಯ ಇರುವ ಕೊಠಡಿಗಳನ್ನು ಸಮರ್ಪಕವಾಗಿ ಬಳಸಲು ಮಾನ್ಯ ಕುಲಪತಿಗಳು ಸೂಚಿಸಿದರು.<br>5. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಕ್ಕೆ AOS/ Accounts officer for constituent college ನಿಯೋಜಿಸಲು ಅನುಮೋದಿಸಲಾಯಿತು.<br>6. ಲೇಡೀಸ್ ಟಾಯಿಲೆಟ್‌ನಲ್ಲಿ sanitary pad ಹಾಗೂ ಬರ್ನಿಂಗ ಮಶೀನ್ ಅಳವಡಿಸಿ ವಿದ್ಯಾರ್ಥಿನಿಯರಿಗೆ ಅನುಕೂಲ ಮಾಡಿಕೊಡಲು ಸೂಚಿಸಲಾಯಿತು.<br>7. ಕರ್ನಾಟಕ ಮಹಾವಿದ್ಯಾಲಯದ ಮುಖ್ಯ ದ್ವಾರದ ಹತ್ತಿರ Vehicle parking ಮತ್ತು ತರಕಾರಿ ಮಾರುವವರು ಹೆಚ್ಚಾಗಿದ್ದು, ತರಗತಿಗಳು ಬೆಳಿಗ್ಗೆ 8.00 ಗಂಟೆಗೆ ಪ್ರಾರಂಭವಾಗುವದರಿಂದ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಮಹಾವಿದ್ಯಾಲಯದ ಒಳಗೆ ಬರಲು ಬಹಳ ತೊಂದರೆಯುಂಟಾಗಿರುತ್ತದೆ. ಕಾರಣ ಈ ವಿಷಯದ ಕುರಿತು ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದವರು ಬೆಳಿಗ್ಗೆ 8.00 ಗಂಟೆಗೆ ಮೊದಲು ವಾಹನಗಳನ್ನು ಹಾಗೂ ತರಕಾರಿ ಮಾರುವವರನ್ನು ನಿರ್ಬಂಧಿಸಿ ತೆರವುಗೊಳಿಸುವ ಕುರಿತು ಪತ್ರ ಬರೆದು ಪೋಲಿಸರನ್ನು ಸಂಪರ್ಕಿಸಲು ತಿಳಿಸಲಾಯಿತು.<br>8. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ಉಪ ಪ್ರಾಚಾರ್ಯರ ಹುದ್ದೆಗಾಗಿ ಜೇಷ್ಠತಾ ಯಾದಿಯಲ್ಲಿರುವ ಮೂರು ಹೆಸರುಗಳನ್ನು ಸೂಚಿಸಿದರು.<br>1) Dr. J.T. Gudgur 2) Dr. G.H. Malimath 3) Dr. L.T. Nayak |

| | | | |
|---|---|---|---|
| | | | 9. ಅಪರಾಧಶಾಸ್ತ್ರ & ವಿಧಿವಿಜ್ಞಾನ ವಿಷಯವನ್ನು ಕೋರ್ಸ ಆಗಿ ಆರಂಭಿಸಲು ಪ್ರಸ್ತಾಪಿಸಿದಾಗ, ಮೂಲಸೌಕರ್ಯಗಳು ಮತ್ತು ಖಾಯಂ ಬೋಧಕರಿಲ್ಲದ ಕಾರಣ ಕೂಲಂಕುಷವಾಗಿ ಚರ್ಚಿಸಿ ನಂತರದ ದಿನಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು.<br>10. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ನೀರಿನ ಪೈಪ್‌ಲೈನಗಳು ಸುಮಾರು ವರ್ಷಗಳಾಗಿರುವ ಪ್ರಯುಕ್ತ ಕೊಳೆತು ಹಾಳಾಗಿರುವದರಿಂದ ಹೊಸದಾಗಿ ನೀರಿನ ಪೈಪಲೈನ ಅಳವಡಿಸಲು ಸ್ಥಾನಿಕ ಅಭಿಯಂತರರಿಗೆ ಅಂದಾಜು ಮತ್ತು ನೀಲನಕ್ಷೆ ತಯಾರಿಸಿ ಮುಂದಿನ ಕ್ರಮ ಕೈಗೊಳ್ಳುವ ಜವಾಬ್ದಾರಿಯನ್ನು ಸ್ಥಾನಿಕ ಅಭಿಯಂತರರಿಗೆ ವಹಿಸಲು ಮಾನ್ಯ ಕುಲಪತಿಗಳು ತಿಳಿಸಿದರು.<br>11. ಕರ್ನಾಟಕ ವಿಜ್ಞಾನ ಹಾಗೂ ಕಲಾ ಮಹಾವಿದ್ಯಾಲಯಕ್ಕೆ ಸಂಬಂಧಿಸಿದ ಕ್ಯಾಂಟೀನ, ಗ್ರೌಂಡ ಹಾಗೂ ಟೆಂಡರಗಳಿಗೆ ಅಂತಿಮವಾಗಿ ಇಬ್ಬರೂ ಪ್ರಾಚಾರ್ಯರಿಗೆ ವಹಿಸುವದರ ಬಗ್ಗೆ ಮಾನ್ಯ ಕುಲಪತಿಗಳು ತಿಳಿಸಿದರು.<br>12. ಕರ್ನಾಟಕ ಜಿಮಖಾನಾ ಖಾತೆಯ ಬಗ್ಗೆ ಬರುವ ಮುಂದೆ G C Meeting ನಲ್ಲಿ ಅನುಮೋದನೆ ಪಡೆಯಲು ಮಾನ್ಯ ಕುಲಪತಿಗಳು ತಿಳಿಸಿದರು. |

ಪ್ರಾಚಾರ್ಯರು

ಕುಲಪತಿಗಳು

Karnatak University's,
KARNATAK SCIENCE COLLEGE, DHARWAD
*NAAC Accredited B++*
Phone No: 0836-2215410 & 2215400
Email: principal.kscd@gmail.com
Fax: 0836-2744334
Web: www.kscd.ac.in

No. KSCD/2026-27/

Date: 16-04-2026

ಗೆ,
ಮಾನ್ಯ ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ.

ವಿಷಯ: ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಸಭೆಯಲ್ಲಿ (Governing Council Meeting) ಚರ್ಚಿಸಿದ ವಿಷಯ ಹಾಗೂ ನಿರ್ಣಯಗಳ ನಡಾವಳಿಯ ಪ್ರತಿಗಳನ್ನು ಸಲ್ಲಿಸುವ ಕುರಿತು.

ಮಾನ್ಯರೆ,

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಸಭೆಯನ್ನು (Governing Council Meeting) ದಿನಾಂಕ: 27.03.2026 ರಂದು ಮಧ್ಯಾಹ್ನ 3.00 ಗಂಟೆಗೆ ಡಾ. ಡಿ.ಸಿ. ಪಾವಟೆ ಸಭಾಭವನದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿರುತ್ತದೆ. ಸಭೆಯಲ್ಲಿ ಚರ್ಚಿಸಿದ ವಿಷಯಗಳ ಹಾಗೂ ನಿರ್ಣಯಗಳ ಪ್ರತಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ
MSalunke
Principal,
Karnatak Science College,
Dharwad

ಪ್ರತಿ ಮಾಹಿತಿಗಾಗಿ:
1. **ಪ್ರೊ. ಎ.ಎಂ. ಖಾನ,** ಮಾನ್ಯ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
2. **ಶ್ರೀಮತಿ ರತ್ನಾ ಪಾಟೀಲ,** ಸಿಂಡಿಕೇಟ ಸದಸ್ಯರು, ನಾರಾಯಣಪುರ, ಧಾರವಾಡ-083.
3. **ನಿರ್ದೇಶಕರು (ಪದನಿಮಿತ್ತ),** ವಿದ್ಯಾವಿಷಯಕ ಪರಿಷತ್ ಸದಸ್ಯರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
4. **ಡಾ. ಜಿ.ಎಚ್. ಮಳಿಮಠ,** ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
5. **ಡಾ. (ಶ್ರೀಮತಿ) ವ್ಹಿ.ಎ. ಅಮ್ಮಿನಭಾವಿ,** ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ
6. **ಡಾ.(ಶ್ರೀಮತಿ) ನಿರುಪಮಾ ಜೆ.ಎಂ.,** ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ
7. **ಹಣಕಾಸು ಅಧಿಕಾರಿಗಳು,** ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
8. **ಸ್ಥಾನಿಕ ಅಭಿಯಂತರರು,** ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
9. **ನಿರ್ದೇಶಕರು,** ಮಾಹಿತಿ ತಂತ್ರಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
10. **ಪ್ರಾಚಾರ್ಯರು,** ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
11. **ವೆಬ್‌ಸೈಟ್ ಕೋಆರ್ಡಿನೇಟರ್,** ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ.
12. **ಕಚೇರಿ ಪ್ರತಿ.**